# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ, ವಿದ್ಯಾರಣ್ಯಪುರ

ಸಂ. ನೋ.ಅ/ಬಿ.ಬಿ.ಎಂ.ಪಿ/ವಿ-14 /ಪಿಆರ್ ನಂ/04/2022-23

ವಿದ್ಯಾರಣ್ಯಪುರ ವಾರ್ಡ್ ಕಛೇರಿ
ಇಂದಿರಾ ಕ್ಯಾಂಟೀನ್ ಪಕ್ಕ,
ಹೆಚ್.ಎಂ.ಟಿ ಲೇಔಟ್, 1ನೇ ಬ್ಲಾಕ್,
ಬಿಬಿಎಂಪಿ, ಬೆಂಗಳೂರು 560097
ದಿನಾಂಕ : 15/10/2022

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 14 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 15/10/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದವರ ಹೆಸರು | ಪದನಾಮ |
|---|---|---|
| 1 | ಶ್ರೀಮತಿ ರಶ್ಮಿ | ನೋಡಲ್ ಅಧಿಕಾರಿ ಹಾಗೂ ಹಿರಿಯ ಸಹಾಯಕ ನಿರ್ದೇಶಕರು (ತೋಟಗಾರಿಕೆ), ತೋಟಗಾರಿಕೆ ವಿಭಾಗ |
| 2 | ಶ್ರೀ ಅರ್ಚನಾ | ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು |
| 3 | ಶ್ರೀ ಕೆ.ಎನ್ ಬಾಬು ರೆಡ್ಡಿ | ಸಹಾಯಕ ಅಭಿಯಂತರರು, (ವಿದ್ಯುತ್) |
| 4 | ಶ್ರೀ ಸಂದೀಪ್ ಟಿ.ಎಸ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 5 | ಶ್ರೀ ಸಂಜಯ್ ಎ.ವಿ | ಸಹಾಯಕ ನಿರ್ದೇಶಕರು, ನಗರ ಯೋಜನೆ |
| 6 | ಶ್ರೀ ಅಕ್ಷತ್ ಎಂ.ಎಂ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು |
| 7 | ಶ್ರೀಮತಿ ಧನಲಕ್ಷ್ಮಿ ಎಂ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ಬಿ |
| 8 | ಶ್ರೀ ಜಮೀರ್ ಆವತಿ | ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ವಿದ್ಯಾರಣ್ಯಪುರ |
| 9 | ಶ್ರೀಮತಿ ಅನಿತಾ ಬಿ.ಎನ್ | ಮೌಲ್ಯ ಮಾಪಕರು |
| 10 | ಶ್ರೀ ವೆಂಕಟೇಗೌಡ | ಕಂದಾಯ ಪರಿವೀಕ್ಷಕರು |
| 11 | ಶ್ರೀ ಶಿವರಾಜು ಕೆ.ಆರ್ | ಆರೋಗ್ಯ ಇಲಾಖೆ |
| 12 | ಶ್ರೀ ರಘು | ವಿಪತ್ತು ಪರಿಣಿತರು |
| 13 | ಶ್ರೀ ವಿಶ್ವನಾಥ್ | ಸಾರ್ವಜನಿಕರು |
| 14 | ಶ್ರೀ ಸತ್ಯನಾರಾಯಣ ಚೆಟ್ಟಿ | ಬಿ.ಇ.ಎಲ್ ವಸತಿ ಕ್ಷೇಮಾಭಿವೃದ್ಧಿ ಸಂಘ |
| 15 | ಶ್ರೀ ಶ್ರೀಕಾಂತ್ ಎಂ.ಎನ್ | ಸಾರ್ವಜನಿಕರು |
| 16 | ಶ್ರೀ ಶಶಾಂಕ್ | ಸಾರ್ವಜನಿಕರು |
| 17 | ಶ್ರೀಮತಿ ಮಾಧುರಿ | ಸಾರ್ವಜನಿಕರು |
| 18 | ಇತರೆ ಸಾರ್ವಜನಿಕರು | |

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿ ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸಿ ಇಂದಿನ ಸಭೆಯನ್ನು ನಡೆಸಲಾಯಿತು.

ದಿನಾಂಕ 15/10/2022ರಂದು ಚರ್ಚಿಸಿರುವ ಸಭಾ ನಡವಳಿ

| ಕ್ರ.ಸಂ. | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ/ಇಲಾಖೆ |
|---|---|---|---|
| 1 | ಜ್ಞಾನೇಶ್ವರಿ ಬಡಾವಣೆ, ವೆಂಕಟಸ್ವಾಮಪ್ಪ ಬಡಾವಣೆ ಹಾಗೂ ಹೆಚ್.ಎಂ.ಟಿ 2ನೇ ಬ್ಲಾಕ್‌ನಲ್ಲಿ ಒಳಚರಂಡಿ ಸಮಸ್ಯ ಹೆಚ್ಚಾಗಿರುವುದರಿಂದ ಬಗೆ. ಹರಿಸಲು ಕೋರಿದರು | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 2 | ವೆಂಕಟಸ್ವಾಮಪ್ಪ ಬಡಾವಣೆಯ ಹತ್ತಿರವಿರುವ ನರಸೀಪುರ ಕೆರೆಯಲ್ಲಿ ನೀರು ಹರಿಯದೆ ಅಲ್ಲಿಯೇ ನಿಲ್ಲುತ್ತಿರುವುದರಿಂದ ಸರಿಪಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 3 | ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಸುಮಾರು 5 ರಿಂದ 6 ಓವರ್ ಹೆಡ್ ಟ್ಯಾಂಕ್‌ಗಳಿದ್ದು, ಸದರಿ ಟ್ಯಾಂಕ್‌ಗಳು ತುಂಬಾ ಹಳೆಯದಾಗಿದ್ದು, ಯಾವ ಸಂದರ್ಭದಲ್ಲಿ ಬೇಕಾದರೂ ಬೀಳುವ ಸಂಭವವಿರುವುದರಿಂದ ತೆರವುಗೊಳಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮೇಲಾಧಿಕಾರಿಗಳೊಡನೆ ಚರ್ಚಿಸುವುದಾಗಿ ತಿಳಿಸಿದರು | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಅನಧಿಕೃತವಾಗಿ ಕೊಳವೆ ಬಾವಿ ಕೊರೆಯುತ್ತಿರುವ ಮಾಲೀಕರ ವಿರುದ್ಧ FIR ಹಾಕಲು ಕೋರಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮೇಲಾಧಿಕಾರಿಗಳೊಡನೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5 | ಬಿ.ಇ.ಎಲ್ ವೈಟ್ ಸ್ಕ್ವೇರ್ ಅಪಾರ್ಟ್‌ಮೆಂಟ್‌ನವರು ಸಂಸ್ಕರಿಸಿದ ನೀರನ್ನು ನರಸೀಪುರ ಕೆರೆಗೆ ಬಿಟ್ಟಿರುವ ಬಗ್ಗೆ ದೂರು ನೀಡಿರುತ್ತಾರೆ | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ/ ಕಾರ್ಯಪಾಲಕ ಅಭಿಯಂತರರು (ಕೆರೆಗಳು) |
| 6 | ನೀರಿನ ಕೊಳವೆ ಸಾಲನ್ನು ಬೇರೆ ಕಡೆ Divert ಮಾಡುವಾಗ ರಸ್ತೆ ಅಗೆದು ಹಾಳು ಮಾಡಿದ್ದು, ಸರಿ ಪಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಸಾಯಿ ಬಾಬ ದೇವಸ್ಥಾನದ ರಸ್ತೆ ಜಂಕ್ಷನ್‌ನಲ್ಲಿ 7ನೇ ಅಡ್ಡರಸ್ತೆ, 8ನೇ ಮುಖ್ಯ ರಸ್ತೆಯಲ್ಲಿ ಕಾವೇರಿ ಮತ್ತು ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸುವಾಗ ರಸ್ತೆ ಅಗೆದು ಹಾಳು ಮಾಡಿದ್ದು, ಸದರಿ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದರಿಂದ ಸದರಿ ರಸ್ತೆಯನ್ನು ಡಾಂಬರೀಕರಣಗೊಳಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪ ವಿಭಾಗ/ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 8 | ಗಣಪತಿ ದೇವಸ್ಥಾನದ ಕಾರ್ನರ್‌ನಲ್ಲಿ ಬೆಸ್ಕಾಂ ವತಿಯಿಂದ ಅಗೆದಿರುವ ರಸ್ತೆಯನ್ನು ದುರಸ್ಥಿ ಮಾಡಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬೆಸ್ಕಾಂ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯ ಪುರ ಉಪ ವಿಭಾಗ |

| | | | |
|---|---|---|---|
| 9 | ಎಲೆಕ್ಟ್ರಿಕಲ್ ಲೈನ್ ಗೆ ಹತ್ತಿರವಿರುವ ಮರಗಳ ಕೊಂಬೆಗಳನ್ನು ಸವರಲು ಕೋರಿದರು | ಇಂತಹ ಮರಗಳ ವಿವರಗಳನ್ನು ಬೆಸ್ಕಾಂವತಿಯಿಂ ದ ಅರಣ್ಯ ಇಲಾಖೆಗೆ ನೀಡಲು ತಿಳಿಸಲಾಯಿತು | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ ಉಪ ಅರಣ್ಯ ಸಂರಕ್ಷಣ ಅಧಿಕಾರಿ (ಅರಣ್ಯ) |
| 10 | ಹೆಚ್.ಎಂ.ಟಿ 3ನೇ ಬ್ಲಾಕ್, 8ನೇ ಮತ್ತು 9ನೇ ಅಡ್ಡರಸ್ತೆಯ ಖಾಲಿ ಜಾಗದಲ್ಲಿ ಪೊದೆಗಳು ಬೆಳೆದಿದ್ದು, ತ್ಯಾಜ್ಯವನ್ನು ಎಸೆಯುತ್ತಿರುವುದರಿಂದ ಸದರಿ ಖಾಲಿ ಜಾಗವನ್ನು ಸ್ವಚ್ಛಗೊಳಿಸಿ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಈ ಕುರಿತು ಘನ ತ್ಯಾಜ್ಯ ನಿರ್ವಹಣೆ ವಿಭಾಗಕ್ಕೆ ಕ್ರಮ ವಹಿಸಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ |
| 11 | ದೊಡ್ಡಬೊಮ್ಮಸಂದ್ರ ಕಬೀರ್ ಆಶ್ರಮದ ಹತ್ತಿರ ಒಣ ತ್ಯಾಜ್ಯ ಸಂಗ್ರಹಣೆ ಕಾರ್ಯ ಸಮರ್ಪಕವಾಗಿರುವುದಿಲ್ಲ ಎಂದು ದೂರು ನೀಡಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಈ ಕುರಿತು ಘನ ತ್ಯಾಜ್ಯ ನಿರ್ವಹಣೆ ವಿಭಾಗಕ್ಕೆ ಕ್ರಮ ವಹಿಸಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ |
| 12 | ಜಿ.ಕೆ.ವಿ.ಕೆ ಡಬಲ್ ರಸ್ತೆಯಲ್ಲಿ ಹಾಗೂ ಸೆಂಟ್ ಫಿಲೋಮಿನಾ ಶಾಲೆ ನರಸೀಪುರ ಸರ್ಕಾರಿ ಶಾಲೆ ಹಿಂಭಾಗ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದರಿಂದ ಕೂಡಲೇ ಗಮನಹರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕ್ರಮ ವಹಿಸುವುದಾಗಿ ತಿಳಿಸಿದರು. | ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ವಿದ್ಯಾರಣ್ಯಪುರ ಪೋಲೀಸ್ ಠಾಣೆ |
| 13 | ಮಹಿಳಾ ದಕ್ಷತಾ ಸಮಿತಿ ಹಿಂಭಾಗದಲ್ಲಿರುವ ಸಿ.ಎ ಸೈಟ್ ನಲ್ಲಿ ಸಾಯಂಕಾಲದ ನಂತರ ಧೂಮಪಾನ, ಮದ್ಯಪಾನ, ಹಾಗೂ ಇನ್ನಿತರೆ ಚಟುವಟಿಕೆಗಳು ನಡೆಯುತ್ತಿರುವುದರಿಂದ ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಕ್ರಮ ವಹಿಸುವುದಾಗಿ ತಿಳಿಸಿದರು. | ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ವಿದ್ಯಾರಣ್ಯಪುರ ಪೋಲೀಸ್ ಠಾಣೆ |
| 14 | ಆಂಜನೇಯ ಸ್ವಾಮಿ ದೇವಸ್ಥಾನದ ಉದ್ಯಾನವನ, ಹೆಚ್.ಎಂ.ಟಿ ಲೇಔಟ್ ಉದ್ಯಾನವನ ಹಾಗೂ ಇನ್ನಿತರೆ ಉದ್ಯಾನವನಗಳಲ್ಲಿ ಪಾದಚಾರಿ ಮಾರ್ಗದ ಟೈಲ್ಸ್ ಒಡೆದಿದ್ದು ಸರಿಪಡಿಸಲು ಹಾಗೂ ಮಕ್ಕಳ ಆಟಿಕೆಗಳನ್ನು ಪರಿವೀಕ್ಷಿಸಿ ಸರಿಪಡಿಸಲು ಕೋರಿದರು.\ | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಿವಿಲ್ ಕಾಮಗಾರಿಗಳು ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂದಿಸಿದ್ದು ಸದರಿ ವಿಭಾಗಕ್ಕೆ ಕ್ರಮ ಕೈಗೊಳ್ಳಲು ತಿಳಿಸಿದರು. | ಕಾರ್ಯಪಾಲಕ ಅಭಿಯಂತರರು (ಯೋಜನೆ), ಯಲಹಂಕ |
| 15 | ಬಿಬಿಎಂಪಿ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಹೊಸದಾಗಿ ಮಕ್ಕಳ ಆಟಿಕೆ ಉಪಕರಣಗಳನ್ನು ಅಳವಡಿಸಿದ್ದು, ಉಪಯೋಗಿಸಲು ಅನುವಾಗುವಂತೆ ಏರ್ಪಾಡು ಮಾಡಲು ಕೋರಿದರು | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸದರಿ ಸಿವಿಲ್ ಕಾಮಗಾರಿಯು ಯೋಜನಾ ವಿಭಾಗದಿಂದ ನಿರ್ವಹಿಸಿದ್ದು, ಸದರಿ ವಿಭಾಗಕ್ಕೆ ಕ್ರಮ ಕೈಗೊಳ್ಳಲು ತಿಳಿಸಿದರು | ಕಾರ್ಯಪಾಲಕ ಅಭಿಯಂತರರು (ಯೋಜನೆ), ಯಲಹಂಕ |
| 16 | ಉದ್ಯಾನವನ ಮತ್ತು ಆಟದ ಮೈದಾನಗಳಿಗೆ ಪ್ರಮುಖ ಮೂಲಭೂತ ಸೌಕರ್ಯವಾದ ಶೌಚಾಲಯ ವ್ಯವಸ್ಥೆ ಕಲ್ಪಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಿವಿಲ್ ಕಾಮಗಾರಿಗಳು ಇಂಜಿನಿಯರಿಂಗ್ ವಿಭಾಗಕ್ಕೆ ಸಂಬಂದಿಸಿದ್ದು ಸದರಿ ವಿಭಾಗಕ್ಕೆ ಕ್ರಮ ಕೈಗೊಳ್ಳಲು ತಿಳಿಸಿದರು. | ಕಾರ್ಯಪಾಲಕ ಅಭಿಯಂತರರು (ಯೋಜನೆ), ಯಲಹಂಕ /ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 17 | ಬಾಲಾಜಿ ಬಡಾವಣೆ, ಶ್ರೀನಿಧಿ ಬಡಾವಣೆ, ವೈಷ್ಣವಿ ಬಡಾವಣೆ, ಎಂ.ಎಸ್ ಪಾಳ್ಯ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾದ ಸಾಯಿ ಬಾಬಾ ದೇವಸ್ಥಾನದ ರಸ್ತೆಯು ವಾಹನಗಳ ಸಂಚಾರ ದಟ್ಟಣೆಯಿಂದ ಕೂಡಿದ್ದು ಅಪಘಾತಗಳು ಸಂಭವಿಸುತ್ತಿದ್ದು, ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಟ್ರಾಫಿಕ್ ಪೋಲೀಸ್ ವಿಭಾಗಕ್ಕೆ ಈ ಕುರಿತು ಕ್ರಮ ವಹಿಸಲು ಸೂಚಿಸುವುದಾಗಿ ತಿಳಿಸಿದರು. | ಟ್ರಾಫಿಕ್ ಪೋಲೀಸ್ ಸ್ಟೇಷನ್, ಯಲಹಂಕ |

| | | | |
|---|---|---|---|
| 18 | ಹೆಚ್.ಎಂ.ಟಿ ಲೇಔಟ್ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ನಾಯಿಗಳನ್ನು ಕರೆದುಕೊಂಡು ಬಂದು ಗಲೀಜು ಮಾಡಿಸುತ್ತಿರುವುದರಿಂದ ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಂಬಂದಪಟ್ಟ ಇಲಾಖೆಗೆ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು. | ಸಹಾಯಕ ನಿರ್ದೇಶಕರು, ಪಶು ಸಂಗೋಪಾಲನ ವಿಭಾಗ |
| 19 | ಎನ್.ಟಿ.ಐ ಬಡಾವಣೆಯ ಸುವರ್ಣ ಮಹೋತ್ಸವ ಮೈದಾನದಲ್ಲಿ ಶೌಚಾಲಯದ ವ್ಯವಸ್ಥೆ ಕಲ್ಪಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿಬಿಎಂಪಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 20 | ಹೆಚ್.ಎಂ.ಟಿ ಬಡಾವಣೆ 1ನೇ ಮತ್ತು 2ನೇ ಬ್ಲಾಕ್‌ನ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿಬಿಎಂಪಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 21 | ಜಿಯೋ, ಏರ್‌ಟೆಲ್ ಹಾಗೂ ಇತರೆ ಕಂಪೆನಿಗಳು ಟವರ್ ಹಾಕುವುದಕ್ಕೆ ಅನುಮತಿ ಕೊಡದೆ ಇದ್ದರೂ ಟವರ್ ಅಳವಡಿಸಿರುವುದಕ್ಕೆ ದಂಡ ವಿಧಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿಬಿಎಂಪಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 22 | ಜಿಯೋ, ಏರ್‌ಟೆಲ್ ಹಾಗೂ ಇತರೆ ಕಂಪೆನಿಗಳು ರಸ್ತೆ ಅಗೆದು ಹಾಳು ಮಾಡಿದ್ದು ದುರಸ್ತಿ ಮಾಡಲು ಕೋರಿದರು | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಬಿಬಿಎಂಪಿ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 23 | Shoping Malls, Commercial Complex ಗಳ ಕಟ್ಟಡವು ಮುಕ್ತಾಯವಾಗುವುದಕ್ಕೆ ಮೊದಲು ಪಾರ್ಕಿಂಗ್ ವ್ಯವಸ್ಥೆ ಉಲ್ಲಂಘನೆ ಕುರಿತು ತಪಾಸಣೆ ಮಾಡಲು ಕೋರಿದರು | ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರು ಮಾತನಾಡುತ್ತಾ ಅಂತಹ ಪ್ರಕರಣದ ಕಟ್ಟಡಗಳಿಗೆ ನೋಟೀಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು. | ಸಹಾಯಕ ನಿರ್ದೇಶಕರು ನಗರ ಯೋಜನೆ |

ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗುವುದು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಯಿತು

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೋಡೆಲ್ ಅಧಿಕಾರಿಗಳು
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು